**ಪಾಠ–3** **ಏಪ್ರಿಲ್ 21–28**

# ಯೇಸು ಮತ್ತು ಪ್ರಕಟಣೆಯ ಪುಸ್ತಕ

**ಸಬ್ಬತ್ತಿನ ಮಧ್ಯಾಹ್ನ**

**ಈ ವಾರದ ಅಧ್ಯಯನಕ್ಕಾಗಿ :** 1 ಕೊರಿಂಥ 10:1–11, ಪ್ರಕಟಣೆ 12:1–17, 19:11–15, ಎಫೆಸ 1:20, ಪ್ರಕಟಣೆ 11:19, 1:10–18

*ಸ್ಮರಣ ವಾಕ್ಯ :* **"ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು". (ಪ್ರಕಟನೆ 3:21)**

ಹೊಸ ಒಡಂಬಡಿಕೆಯ ವೇಗವಾದ ಓದುವಿಕೆಯು ಕೂಡ ಒಂದು ಸತ್ಯವನ್ನು ಬಹಿರಂಗಪಡಿಸುತ್ತದೆ:ಹೊಸ ಒಡಂಬಡಿಕೆಯು ಹಳೆಯ ಒಡಂಬಡಿಕೆಯ ಜೊತೆಗೆ ನೇರವಾಗಿ ತಳುಕುಹಾಕಿಕೊಂಡಿದೆ. ಸುವಾರ್ತೆ ಮತ್ತು ಪತ್ರಿಕೆಗಳು ಮತ್ತೆ ಮತ್ತೆ ಹಳೆಯ ಒಡಂಬಡಿಕೆಯಿಂದ ನೇರವಾಗಿ ವ್ಯಾಖ್ಯಾನಗಳನ್ನು ತೆಗೆದುಕೊಳ್ಳುತ್ತವೆ ಅಥವಾ ಅದರ ಉಲ್ಲೇಖವನ್ನು ಮಾಡುತ್ತವೆ. ಆತನ ಕುರಿತಾಗಿ ಮತ್ತು ಆತನ ಸೇವೆಯ ಕುರಿತಾಗಿ ಯೇಸುವು ಸ್ವತಃ ತಾನೇ ಮಾತನಾಡುತ್ತಾ ಯೇಸುವು ಎಷ್ಟೋ ಸಾರಿ ಶಾಸ್ತ್ರಗಳು ನೆರವೇರಬೇಕಾಗಿವೆ ಎಂದು ಹೇಳಿದನು (ಮತ್ತಾಯ 26:54,56: ಮಾರ್ಕ 14:49; ಯೋಹಾನ 13:18; 17:12).

ಇದೆ ವಿಷಯವನ್ನು ಪ್ರಕಟಣೆಯ ಪುಸ್ತಕದ ಕುರಿತಾಗಿ ಕೂಡ ಹೇಳಬಹುದು. ಪ್ರಕಟಣೆಯ ಪುಸ್ತಕವನ್ನು ನಾವು ಹಳೆಯ ಒಡಂಬಡಿಕೆಯಿಂದ ಅದರಲ್ಲೂ ದಾನಿಯೇಲನ ಪುಸ್ತಕದಿಂದ ಬೇರ್ಪಡಿಸಲು ಸಾದ್ಯವಿಲ್ಲ. ಈ ಒಂದು ಕಾರಣಕ್ಕಾಗಿ ನಾವು ಈ ಎರಡೂ ಪುಸ್ತಕಗಳನ್ನು ಜೊತೆಯಾಗಿ ಅಧ್ಯಯನ ಮಾಡಬೇಕು.

ಹಳೆಯ ಒಡಂಬಡಿಕೆ ಅನೇಕ ಉಲ್ಲೇಖಗಳಲ್ಲಿ ಮುಖ್ಯವಾದದ್ದು ಅದರಲ್ಲೂ ಪ್ರಕಟಣೆಯು ಪುಸ್ತಕದ ಜೊತೆಗೆ ನಾವು ನೋಡುವುದು ಈ ಪುಸ್ತಕಗಳು ಯೇಸುವಿನ ಕುರಿತಾಗಿ ಹೇಳುತ್ತವೆ. ಪ್ರಕಟಣೆಯು ಕ್ರಿಸ್ತನ ಕುರಿತಾಗಿದೆ, ಆತನು ಯಾರು,

ಆತನ ಜನರಿಗಾಗಿ ಆತನು ಏನು ಮಾಡುತ್ತಾನೆ ಮತ್ತು ಕೊನೆಯ ಕಾಲದಲ್ಲಿ ನಮಗಾಗಿ ಆತನು ಏನು ಮಾಡುತ್ತಾನೆ. ಕೊನೆಯ ಕಾಲದ ಕುರಿತಾಗಿ ನಾವು ಮಾತನಾಡಬೇಕಾದರೆ ಯೇಸುವನ್ನು ಮುಂದೆ ಮತ್ತು ಮಧ್ಯದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ, ಇದನ್ನೇ ಪ್ರಕಟಣೆಯ ಪುಸ್ತಕ ಮಾಡುವುದಾಗಿದೆ. ಈ ವಾರದ ಪಾಠವು ಪ್ರಕಟಣೆಯ ಪುಸ್ತಕದಲ್ಲಿ ಯೇಸುವಿನ ಕುರಿತಾಗಿ ಏನು ಹೇಳುತ್ತದೆ ಎಂದು ಅಧ್ಯಯನ ಮಾಡುವುದಾಗಿದೆ.

**ಈ ವಾರದ ಪಾಠವನ್ನು ಏಪ್ರಿಲ್ 21 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಪ್ರಕಟಣೆ ಪುಸ್ತಕದ ರಚನೆ

ದಾನಿಯೇಲ ಮತ್ತು ಪ್ರಕಟಣೆಯ ಪುಸ್ತಕದ ಎರಡು ಮುಖ್ಯವಾದ ಸಮಾನತೆಗಳು ಯಾವುವು ಎಂದರೆ ಅವುಗಳ ಮೂಲ ಎರಡು ವಿಭಾಗಗಳು:ಚಾರಿತ್ರಾತ್ಮಕ ಮತ್ತು ಕೊನೆಯ ಕಾಲದ ಚರಿತ್ರೆ. (ಕೊನೆಯ ಕಾಲದ ಘಟನೆಗಳು). ಈ ಎರಡು ವಿಷಯಗಳು ಈ ಎರಡು ಪುಸ್ತಕಗಳಲ್ಲಿ ಸೇರಿಕೊಂಡಿವೆ. ಚರಿತ್ರೆಯ ಘಟನೆಗಳನ್ನು ನಾವು ಮುನ್ನುಡಿಯಾಗಿ ತೆಗೆದುಕೊಳ್ಳಬಹುದು, ಅಥವಾ ಉದಾಹರಣೆಯಾಗಿ ಇನ್ನೂ ಸಣ್ಣ ಪ್ರಮಾಣದಲ್ಲಿ ಕೊನೆಯ ಕಾಲದ ಮಹಾ ಘಟನೆಗಳಾಗಿ ತೆಗೆದುಕೊಳ್ಳಬಹುದು. ಹಳೆಯ ಒಡಂಬಡಿಕೆಯ ಚರಿತ್ರೆಯನ್ನು ನೋಡುವಾಗ ನಾವು ಮುಂದೆ ಬರಲಿರುವ ಮತ್ತು ನಡೆಯಲಿರುವ ಘಟನೆಗಳ ಕುರಿತಾಗಿ ತಿಳಿದುಕೊಳ್ಳಬಹುದು. ಈ ನಿಯಮವು ಕೇವಲ ದಾನಿಯೇಲ ಮತ್ತು ಪ್ರಕಟಣೆಯ ಪುಸ್ತಕಗಳಿಗೆ ಮಾತ್ರ ಸೀಮಿತವಾಗಿಲ್ಲ.

**1 ಕೊರಿಂಥ 10:1–11 ನ್ನು ಓದಿರಿ. ಈ ಮೇಲೆ ಹೇಳಲಾಗಿರುವ ವಿಷಯಗಳ ಕುರಿತಾಗಿ ಈ ವಚನವು ಏನು ಹೇಳುತ್ತದೆ?**

________________________________________

________________________________________

ಈ ಹಿಂದಿನ ವಾರದಲ್ಲಿ ನಾವು ನೋಡಿದ ಹಾಗೆ ದಾನಿಯೇಲನ ಪುಸ್ತಕದಲ್ಲಿರುವ ಕೆಲವು ಸ್ಥಳೀಯ ಚಾರಿತ್ರಾತ್ಮಕ ಘಟನೆಗಳು (ದಾನಿಯೇಲ 3:6,15,27; ಮತ್ತು 6:6–9,21,22) ಮತ್ತು ವಿಷಯಗಳು ಪ್ರಕಟಣೆಯ ಪುಸ್ತಕದಲ್ಲಿ ತಿಳಿಸಲಾಗಿರುವ ಕೊನೆಯ ಕಾಲದ ಘಟನೆಗಳನ್ನು ಹೋಲುತ್ತವೆ. ಈ ಕಥೆಗಳನ್ನು ಓದುವಾಗ, ಕೊನೆಯ ಕಾಲದಲ್ಲಿ ದೇವರ ಮಕ್ಕಳು ಯಾವ ರೀತಿಯ ಅನುಭವವನ್ನು ಹೊಂದುತ್ತಾರೆ ಎಂಬುದರ ಸಣ್ಣ ನೋಟ, ಆಲೋಚನೆ, ಮತ್ತು ವಿಶಾಲವಾದ ಆಲೋಚನೆಯನ್ನು ನಾವು ಪಡೆಯುತ್ತೇವೆ. ಈಗ ನಾವು ಎದುರಿಸುತ್ತಿರುವ ಸಮಸ್ಯೆಗಳ ಹೊರೆತಾಗಿಯೂ ಕೂಡ ನಾವು ಮುಂದೆ ಬಿಡುಗಡೆಯನ್ನು ಹೊಂದುತ್ತೇವೆ ಎಂಬ ನಿರೀಕ್ಷೆಯನ್ನು ಪಡೆಯುತ್ತೇವೆ. ಪ್ರಕಟಣೆಯು ಇನ್ನೇನೂ ಭೋಧಿಸಿದರೂ ಕೂಡ ಕೊನೆಯ ಜಯದ ಆಶ್ವಾಸನೆಯನ್ನು ನೀಡುತ್ತದೆ.

ಕೆಲವು ವಿನಾಯತಿಗಳನ್ನು ಹೊರೆತು ಪಡಿಸಿದರೆ, ಪ್ರಕಟಣೆಯ 1–11 ಅಧ್ಯಾಯಗಳು ಚರಿತ್ರೆಯನ್ನು ಮತ್ತು ಪ್ರಕಟಣೆ 13–22 ಅಧ್ಯಾಯಗಳು ಕೊನೆಯ ಕಾಲದ ಘಟನೆಗಳ ಕುರಿತಾಗಿ ಹೇಳುತ್ತದೆ.

ಪ್ರಕಟಣೆ 12:1–17 ನ್ನು ಓದಿರಿ. ಈ ಅಧ್ಯಾಯವನ್ನು ನಾವು ಎಲ್ಲಿ ಇಡಬೇಕು, ಚರಿತ್ರೆಯ ಭಾಗದಲ್ಲಿಯೋ ಅಥವಾ ಕೊನೆಯ ಕಾಲದ ಘಟನೆಗಳ ಭಾಗದಲ್ಲಿಯೋ ಮತ್ತು ಯಾಕೆ?

---

ಈ ಅಧ್ಯಾಯವು ಎರಡು ಭಾಗಗಳಿಗೆ ಸೇರಿದೆ ಎಂದು ನಾವು ನೋಡಬಹುದು. ಯಾಕೆ? ಯಾಕೆಂದರೆ ಇದು ಚರಿತ್ರೆಯ ಹೋರಾಟವನ್ನು ಸೈತಾನನು ಪರಲೋಕದಿಂದ ದೊಬ್ಬಲ್ಪಟ್ಟ (ಪ್ರಕಟಣೆ 12:7–9), ಸೈತಾನನು ಮಗುವಾದ ಯೇಸುವನ್ನು ಆಕ್ರಮಣ ಮಾಡುವುದು (ಪ್ರಕಟಣೆ 12:4), ಮತ್ತು ಸಭೆಯನ್ನು ಹಿಂಸಿಸುವುದು ಇದು ಚರಿತ್ರೆಯಲ್ಲಿರುವ ಸಭೆಯನ್ನು ಕುರಿತಾಗಿ ಹೇಳುತ್ತದೆ

(ಪ್ರಕಟಣೆ 12:14–16) ಇದರ ಮುಂದಿನ ಭಾಗವಾಗಿ ಕೊನಯ ಕಾಲದಲ್ಲಿ ಉಳಿದಿರುವ ಸಭೆಯನ್ನು ಸೈತಾನನು ಯಾವ ರೀತಿಯಲ್ಲಿ ಆಕ್ರಮಣ ಮಾಡುತ್ತಾನೆ ಎಂದು ಹೇಳುತ್ತದೆ (ಪ್ರಕಟನೆ 12:17).

ಚರಿತ್ರೆಯಿಂದ ನಾವು ಕಲಿಯುವ ಒಂದು ಮುಖ್ಯವಾದ ಪಾಠವೆಂದರೆ ಚರಿತ್ರೆಯಿಂದ ನಾವು ಎಂದಿಗೂ ಕಲಿಯುವುದಿಲ್ಲ. ಈ ಹಿಂದೆ ಜನರು ಯಾವ ರೀತಿಯಲ್ಲಿ ಜೀವಿಸಿದರೂ ಎಂಬುದು ತಿಳಿದಿದ್ದರೂ ಕೂಡ ಜನರು ಅದೇ ತಪ್ಪುಗಳನ್ನು ಮಾಡುತ್ತಾರೆ. ನಮ್ಮ ಹಿಂದೆ ಇಷ್ಟು ದೊಡ್ಡ ಚರಿತ್ರೆಯಿರುವುದರಿಂದ ನಾವು ಅದೇ ರೀತಿಯು ತಪ್ಪುಗಳನ್ನು ಮಾಡುವುದರಿಂದ ಹೇಗೆ ದೂರವಿರಬಹುದು?

**ಸೋಮವಾರ**

## ಯೇಸುವಿನ ರೂಪಗಳು

ಈ ಕೆಳಗಿನ ವಚನಗಳನ್ನು ಓದಿರಿ. ಯೇಸುವಿನ ವಿವಿಧ ಹೆಸರುಗಳು ಯಾವುವು ,ಮತ್ತು ಆತನಿಗೆ ಯಾವವ ರೂಪಗಳನ್ನು ನೀಡಲಾಗಿದೆ ಮತ್ತ ಆತನು ಏನು ಮಾಡಿದ್ದಾನೆ, ಏನು ಮಾಡುತ್ತಿದ್ದಾನೆ ಅಥವಾ ಮುಂದೆ ಏನು ಮಾಡುತ್ತಾನೆ. ಯೇಸುವಿನ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?

**ಪ್ರಕಟಣೆ 1:5** ______________________________

**ಪ್ರಕಟಣೆ 1:18** ______________________________

**ಪ್ರಕಟಣೆ 5:8** ______________________________

**ಪ್ರಕಟಣೆ 19:11–15** ______________________________

**ಪ್ರಕಟಣೆ 21:6** ______________________________

ಈ ವಚನಗಳು ಯೇಸುವಿನ ವಿವಿಧ ರೂಪಗಳನ್ನು ಮತ್ತು ಕಾರ್ಯಗಳನ್ನು ತಿಳಿಸುವ ಕೆಲವು ವಚನಗಳು ಇಲ್ಲಿವೆ. ಆತನು ಕುರಿಮರಿಯಾಗಿದ್ದಾನೆ, ಇದು

ಆತನ ಮೊದಲನೇಯ ಬರೋಣವನ್ನು ಸೂಚಿಸುತ್ತದೆ, ಇದರಲ್ಲಿ ಆತನು ನಮ್ಮ ಪಾಪಗಳಿಗಾಗಿ ತನ್ನನ್ನು ತಾನು ತ್ಯಾಗ ಮಾಡಿದನು. ನೀವು ಹುಳಿಯಿಲ್ಲದವರೆನೆಸಿಕೊಂಡಿದ್ದರಿಂದ ಹಳೆ ಹುಳಿಯನ್ನು ತೆಗೆಧಾಕಿ ಹೊಸ ಕಣಿಕದಂತಾಗಿರ್ರಿ. ಯಾಕೆಂದರೆ ನಮ್ಮ ಪಸ್ಕದ ಕುರಿಯು ಕೊಯಿದದೆ (1 ಕೊರಿಂಥ 5:7). ಆತನು ಸತ್ತವನಾದೆನು, ಮತ್ತು ಇದೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ (ಪ್ರಕಟಣೆ 1:18). ಇದು ಆತನ ಮರಣದ ಮತ್ತು ಪುನರುತ್ಥಾನದ ಸ್ಪಷ್ಟ ಚಿತ್ರಣವಾಗಿದೆ. ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೇಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ (ಲೂಕ 24:46) ಹೇಳುತ್ತದೆ. ಮತ್ತು ಪ್ರಕಟಣೆ 19:11–15, ರಲ್ಲಿ ಆತನ ಎರಡನೇಯ ಬರೋಣದ ಚಿತ್ರಣವನ್ನು ನೀಡಲಾಗಿದೆ, ಆತನು ಈ ಲೋಕಕ್ಕೆ ಅಧಿಕಾರ ಮತ್ತು ಮಹಿಮೆಯನ್ನು ಹಾಗೂ ನ್ಯಾಯ ತೀರಿಸುವುದಕ್ಕೂ ಬರುತ್ತಾನೆ. ಮನುಷ್ಯ ಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ ಸಮೇತವಾಗಿ ಬರುವನು. ಆವಾಗ ಒಬ್ಬೊಬ್ಬನಿಗೆ ಅವನವನ ನಡೆತೆಗೆ ತಕ್ಕ ಫಲವನ್ನು ಕೊಡುವನು (ಮತ್ತಾಯ 16:27).

**ಯೇಸುವಿನ ಜೀವನ, ಮರಣ, ಮತ್ತು ಪುನರುತ್ಥಾನ ಹಾಗೂ ಆತನ ಎರಡನೇಯ ಬರೋಣವನ್ನು ನಮ್ಮ ಜೀವನದ ಕೇಂದ್ರ ಬಿಂದುವಾಗಿ ಮಾಡಿಕೊಂಡು ಅದರ ಕುರಿತಾಗಿ ಅನುದಿನವು ಹೇಗೆ ಧ್ಯಾನ ಮಾಡುವುದು ಮತ್ತು ಅದನ್ನು ನಾವು ಮಾಡುವ ಆಯ್ಕೆಗಳ ಹಿನ್ನಲೆಯಾಗಿ ಹೇಗೆ ನೋಡುವುದು?**

**ಮಂಗಳವಾರ**

## ಪ್ರಕಟಣೆಯಲ್ಲಿ ಗುಡಾರ ಸೇವೆಯ ಮುಖ್ಯೋದ್ದೇಶ

ಪ್ರಕಟಣೆಯ ಪುಸ್ತಕದಲ್ಲಿ ಎರಡು ಮುಖ್ಯವಾದ ಭಾಗಗಳು ಇದ್ದರೂ ಕೂಡ ಇದರಲ್ಲಿ ಮತ್ತೊಂದು ವಿಭಾಗವನ್ನು ನೋಡುತ್ತೇವೆ, ಇದು ಇಬ್ರಿಯರ ಗುಡಾರದ ಸೇವೆಯ ಸುತ್ತಲೂ ಆವರಿಸಿಕೊಂಡಿದೆ. ಗುಡಾರ ಸೇವೆಯ ಮುಖ್ಯೋದ್ದೇಶವು

ಈ ಭಾಗಗಳಿಗೆ ಮಾತ್ರ ಸೀಮಿತವಾಗಿಲ್ಲ ಬದಲಿಗೆ ಅದು ಇಡೀ ಪುಸ್ತಕದಲ್ಲಿ ಹಾಸುಹೊಕ್ಕಾಗಿದೆ.

ಭೂಲೋಕದ ಗುಡಾರದಲ್ಲಿ ಒಬ್ಬನು ಆವರಣದಿಂದ ಆರಂಭಿಸಿ, ಯಜ್ಞದ ವೇದಿಯ ಬಳಿಗೆ ಬಂದು ಅಲ್ಲಿ ಪ್ರಾಣಿಗಳನ್ನು ಅರ್ಪಿಸಿ, ಪ್ರಾಣಿಯು ಬಲಿಯಾದ ನಂತರ, ಇದು ಶಿಲುಬೆಯ ಹೋಲಿಕೆಯಾಗಿದೆ, ಯಾಜಕನು ಗುಡಾರದ ಮೊದಲನೇಯ ಭಾಗಕ್ಕೆ ಪ್ರವೇಶಮಾಡುತ್ತಾನೆ ಇದನ್ನು ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣನಾದ ಮೇಲೆ ಮಾಡಿದ ಕಾರ್ಯಕ್ಕೆ ಸೂಚನೆಯಾಗಿದೆ. ಇದನ್ನು ಯೇಸುವು ದೀಪಸ್ತಂಭಗಳ ನಡುವೆ ಸಂಚರಿಸುವುದನ್ನು ತೋರಿಸುತ್ತದೆ (ಪ್ರಕಟಣೆ 1:13).

**ಪ್ರಕಟನೆ 4:1,2 ನ್ನು ಓದಿರಿ. ತೆರೆದ ಬಾಗಿಲು ಏನು ಸೂಚಿಸುತ್ತದೆ?ಈ ದೃಶ್ಯವು ಎಲ್ಲಿ ಕಾಣಿಸುತ್ತದೆ? ಅ ಪೋ ಕೃ 2:33; 5:31; ಎಫೆಸ 1:20; ಇಬ್ರಿಯರಿಗೆ 10:12,13; ಕೀರ್ತನೆ 110:1; ಪ್ರಕಟನೆ 12:5. ನ್ನು ಕೂಡ ನೋಡಿರಿ.**

______________________________________________

______________________________________________

ಆತನ ಆರೋಹಣದ ನಂತರ ಈ ತೆರೆದ ಬಾಗಿಲಿನ ಮೂಲಕ ಯೇಸುವು ಪರಲೋಕದ ದೇವಾಲಯದ ಪರಿಶುದ್ದ ಸ್ಥಳವನ್ನು ಉದ್ಘಾಟಿಸಿದನು. ಪ್ರಕಟಣೆಯ ಪುಸ್ತಕದಲ್ಲಿ ಯೇಸುವು ಮೊದಲ ಬಾರಿಗೆ ಕಾಣಿಸಿದಾಗ ಆತನು ದೀಪಸ್ತಂಭಗಳ ನಡುವೆ ಸಂಚರಿಸುವುದನ್ನು ಕಾಣುತ್ತೇವೆ ಆಗ ಆತನು ಭೂಲೋಕದ ಗುಡಾರದ ಮೊದಲನೇಯ ಭಾಗದಲ್ಲಿ ನೋಡುತ್ತೇವೆ. (ಪ್ರಕಟಣೆ 1:10–18).

**ಪ್ರಕಟಣೆ 11:19 ನ್ನು ಓದಿರಿ. ಪರಲೋಕದ ದೇವಾಲಯದ ಬಾಗಿಲು ತೆರೆದಿರುವುದು ಮತ್ತು ಯೋಹಾನನು ಭೂಲೋಕದ ಎರಡನೇಯ ಭಾಗದಲ್ಲಿದ್ದ ಮಂಜೂಷವನ್ನು ನೋಡುವುದು ಯಾವ ಪ್ರಾಮುಖ್ಯತೆಯನ್ನು ಪಡೆಯುತ್ತದೆ? (ಯಾಜಕಕಾಂಡ 16:12–14).**

ಪರಲೋಕದಲ್ಲಿ ಮಂಜೂಷದ ದರ್ಶನವು ಯಾವುದೇ ಸಂಶಯವಿಲ್ಲದೆ ಭೂಲೋಕದಲ್ಲಿರುವ ಗುಡಾರದ ಸೇವೆಯ ಅತೀ ಪರಿಶುದ್ದ ಸ್ಥಳ ಅಥವಾ ಗುಡಾರದ ಎರಡನೇಯ ಭಾಗವನ್ನು ಸೂಚಿಸುತ್ತದೆ. ಪ್ರಕಟಣೆಯ ಪುಸ್ತಕದಲ್ಲಿ ಎರಡು ಭಾಗಗಳಲ್ಲಿ ಯೇಸುವು ಮಾಡಿದ ಸೇವೆಯನ್ನು ನೋಡುವುದು ಮಾತ್ರವಲ್ಲದೆ ಈ ಕಾರ್ಯಗಳಿಂದ ಭೂಲೋಕದ ಮತ್ತು ಪರಲೋಕದ ಘಟನೆಗಳು ಒಂದಕ್ಕೊಂದು ಬೆಸೆದುಕೊಂಡಿವೆ. ಪ್ರಕಟಣೆಯಲ್ಲಿ ಚಿತ್ರಿತವಾಗಿರುವ ಕೊನಯ ಕಾಲದ ಘಟನೆಗಳು ಮತ್ತು ಹಿಂಸೆಗಳ ಹೊರೆತಾಗಿಯೂ ಕೂಡ ದೇವರ ಬರೋಣಕ್ಕಾಗಿ ತನ್ನ ಜನರನ್ನು ಸಿದ್ದಪಡಿಸುವ ಕಾರ್ಯದಲ್ಲಿ ಇಡೀ ಪರಲೋಕವು ಆಸಕ್ತಿಯನ್ನು ವಹಿಸಿ ಅದರಲ್ಲಿ ಕ್ರಿಯಾಶೀಲವಾಗಿ ಭಾಗಿಯಾಗಿದೆ. ಪರಲೋಕದ ಮತ್ತು ಭೂಲೋಕದ ಸಂಬಂಧವು ಬಹಳ ಹತ್ತಿರವಾಗಿದೆ. **ಎಲೆನ್ ಜಿ ವೈಟ್, ಮೈ ಲೈಫ್ ಟುಡೇ ಪುಟ 307.**

**ಬುಧವಾರ**

## ಪ್ರಕಟಣೆಯಲ್ಲಿ ಕ್ರಿಸ್ತನು: ಭಾಗ ಒಂದು

ಪ್ರಕಟಣೆಯ ಪುಸ್ತಕದ ರಚನೆ ಮತ್ತು ವಿಷಯಗಳನ್ನು ತೆಗೆದುಕೊಂಡರೆ ಅದರ ಉದ್ದೇಶವೊಂದೆ ಅದುವೇ ಕ್ರಿಸ್ತನ ಕುರಿತಾಗಿ ತಿಳಿಸುವುದು.

ಆದ್ದರಿಂದ ಪುಸ್ತಕದ ಪ್ರಾರಂಭದ ವಚನಗಳು ಯೇಸುಕ್ರಿಸ್ತನ ಕುರಿತಾದ ಪ್ರಕಟಣೆಇದನ್ನು ಸಾಮಾನ್ಯವಾಗಿ ಎರಡು ವಿಧವಾಗಿ ಅರ್ಥಮಾಡಿಕೊಳ್ಳಬಹುದು 1) ಯೇಸುಕ್ರಿಸ್ತನ ಪ್ರಕಟಣೆ ಅಥವಾ 2) ಯೇಸು ಕ್ರಿಸ್ತನ ಕುರಿತಾದ ಪ್ರಕಟಣೆ (ಪ್ರಕಟಣೆ 1:2). ಇದು ಪ್ರಕಟನೆ ಎಂದು ಹೇಳುವುದು ಯಾಕೆಂದರೆ ಪ್ರಕಟಣೆಯ ಪುಸ್ತಕವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ ಎಂದು ಹೇಳುವವರಿಗೆ ಉತ್ತರ ಕೊಡುವ ಉದ್ದೇಶದಿಂದ. ಯಾರು ಓದುವರೋ ಅವರಿಗೆ ಅರ್ಥವಾಗದೆ

ಇರುವ ಉದ್ದೇಶವಿದ್ದರೆ ದೇವರು ಯಾಕೆ ಈ ಪುಸ್ತಕವನ್ನು ಸತ್ಯವೇದದಲ್ಲಿ ಸೇರಿಸುತ್ತಾನೆ.?

**ಪ್ರಕಟಣೆ 1:1–8 ನ್ನು ಓದಿರಿ. ಯೇಸುವಿನ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?**

________________________________________

________________________________________

ಪ್ರಕಟನೆಯ ಪುಸ್ತಕದ ಆರಂಭದಲ್ಲಿ ಕ್ರಿಸ್ತನನ್ನು ಭೂರಾಜರ ಒಡೆಯನು (ಪ್ರಕಟಣೆ 1:5) ಎಂದು ಪರಿಚಯಿಸಲಾಗಿದೆ ಮತ್ತು ಪುಸ್ತಕದ ಕೊನೆಯಲ್ಲಿ ಆತನನ್ನು ರಾಜಾಧಿರಾಜನು (ಪ್ರಕಟಣೆ 19:16) ಎಂದು ಚಿತ್ರಿಸಲಾಗಿದೆ. ಲೋಕದ ಮೇಲೆ ನಡೆಯುತ್ತಿರುವ ಹಿಂಸೆ ಮತ್ತು ಗಲಿಬಿಲಿಯ ನಡುವೆಯೂ ಕೂಡ ನಮಗೆ ನೀಡಲಾಗಿರುವ ಶುಭಸಮಾಚಾರವೆಂದರೆ ನಮ್ಮ ಪ್ರೀತಿಯ ಕರ್ತನಾದ ದೇವರು ಸಂಪೂರ್ಣವಾದ ಹತೋಟಿಯನ್ನು ಹೊಂದಿದ್ದಾನೆ.

ಪ್ರಕಟಣೆ 1:5 ರಲ್ಲಿ, ಕ್ರಿಸ್ತನು ವಿಮೋಚಕನಾಗಿದ್ದಾನೆಂಬ ಸ್ಪಷ್ಟವಾದ ಚಿತ್ರಣವನ್ನು ನೀಡಲಾಗಿದೆ. ನಮ್ಮನ್ನೂ ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ಎಂಬ ಮಾತು ಶಿಲುಬೆಯ ಮೇಲೆ ಆತನು ನಮ್ಮ ಬದಲಾಗಿ ಹೊಂದಿದ ಮರಣವನ್ನು ಸೂಚಿಸುತ್ತದೆ. ಆತನು ನಮ್ಮನ್ನು ನೀತಿವಂತರೆಂದು ನಿರ್ಣಯಿಸಿದ್ದಾನೆ ಮತ್ತು ಆತನು ನಮ್ಮನ್ನು ಶುದ್ಧಿ ಮಾಡಿದ್ದಾನೆ (1 ಕೊರಿಂಥ 6:11). ಇಂತಹ ವಚನಗಳಲ್ಲಿ ನಾವು ರಕ್ಷಣೆಯ ಆಶ್ವಾಸನೆಯನ್ನು ಕಂಡುಕೊಳ್ಳಬಹುದು ಯಾಕೆಂದರೆ ಯೇಸು ಕ್ರಿಸ್ತನು ಮಾತ್ರ ನಮ್ಮ ಪಾಪಗಳನ್ನು ತೊಳೆಯುವವನಾಗಿದ್ದಾನೆ, ಈ ಕಾರ್ಯವನ್ನು ನಾವು ಮಾಡಲು ಸಾಧ್ಯವಾಗುವುದಿಲ್ಲ.

**ಪ್ರಕಟನೆ 1:7 ನ್ನು ಓದಿರಿ. ಈ ವಚನು ನಮಗೆ ಯೇಸುವಿನ ಕುರಿತಾಗಿ ಏನು ಹೇಳುತ್ತದೆ?**

"ಕ್ರಿಸ್ತನು ಮೇಘಗಳ ಮೇಲೆ" ಹಿಂತಿರುಗಿ ಬರುವುದು ಕ್ರೈಸ್ತಿಯ ನಂಬಿಕೆಗೆ ಬಹಳ ಮುಖ್ಯವಾದ ವಿಷಯವಾಗಿದೆ. ಯೇಸುವು ಮತ್ತೆ ಬರುತ್ತಾನೆ, ಇಡೀ ಪ್ರಪಂಚವೇ ಈ ಘಟನೆಯನ್ನು ಪ್ರತ್ಯಕ್ಷವಾಗಿ ನೋಡುತ್ತದೆ, ಮತ್ತು ಈ ಲೋಕದ ಅಂತ್ಯವು ನಿತ್ಯತ್ವದ ವಾಗ್ದಾನಕ್ಕೆ ಮುನ್ನುಡಿಯನ್ನು ಬರೆಯುತ್ತದೆ.

**ಪ್ರಕಟಣೆ 1:8 ಈ ವಚನವು ಯೇಸುವಿನ ಕುರಿತಾಗಿ ಏನು ಹೇಳುತ್ತದೆ?ನಾವು ಎದುರಿಸುತ್ತಿರುವ ಸಮಸ್ಯೆಗಳ ನಡುವೆಯೂ ಕೂಡ ಯಾವ ರೀತಿಯ ಸಮಾಧಾನವನ್ನು ನೀಡುತ್ತದೆ?**

**ಗುರುವಾರ**

## ಪ್ರಕಟಣೆಯಲ್ಲಿ ಕ್ರಿಸ್ತನು: ಭಾಗ ಎರಡು

**ಪ್ರಕಟಣೆ 1:10–18 ನ್ನು ಓದಿರಿ. ಯೇಸುವು ತನ್ನ ಕುರಿತಾಗಿ ತಾನು ಏನು ಹೇಳುತ್ತಾನೆ?**

ಯೇಸುವು ಇಲ್ಲಿ ಗುಡಾರದ ಮೊದಲ ಭಾಗದಲ್ಲಿ ನಿಂತಿರುವುದನ್ನು ನಾವು ನೋಡುತ್ತೇವೆ ಈ ಭಾಗದಲ್ಲಿ ಕ್ರಿಸ್ತನ ಪಾತ್ರವನ್ನು ಗಮನಿಸಿದಾಗ ಯೋಹಾನನ ಪಾದಗಳು ನಡುಗಿದವು. ಯೇಸುವು, ಯಾವಾಗಲೂ ಸಮಾಧಾನವನ್ನು ನೀಡುವಾತನು ಅವನಿಗೆ ಭಯಪಡಬೇಡ ಎಂದು ಹೇಳುತ್ತಾನೆ ಮತ್ತು ತಾನೇ ಅದಿಯೂ ಮತ್ತು ಅಂತ್ಯವಾಗಿದ್ದೇನೆಮೊದಲು ಮತ್ತು ಕೊನೆಯಾಗಿದ್ದೇನೆ ಎಂಬ ಈ ಮಾತುಗಳು ಆತನು ದೇವರಾಗಿರುವ  ನಿತ್ಯತ್ವದ ಲಕ್ಷಣದ ಕುರಿತಾಗಿ ಹೇಳುತ್ತದೆ. ಮುಂದೆ ಆತನು ತನ್ನ ಮರಣ ಮತ್ತು ಪುನರುತ್ಥಾನದ ಕುರಿತಾಗಿ

ಮಾತನಾಡುವುದು ನಮಗೆ ಪುನರುತ್ಥಾನದ ಆಶ್ವಾಸನೆಯನ್ನು ನೀಡುತ್ತದೆ. ಯೇಸುವಿನ ಬಳಿಯಲ್ಲಿ ಮರಣದ ಮತ್ತು ಪಾತಾಳದ ಬೀಗದ ಕೈಗಳು ಇವೆ ಎಂದು ಹೇಳುತ್ತಾನೆ. ಈ ಮಾತಿನ ಅರ್ಥವೆಂದರೆ ಯೇಸುವು ಇಲ್ಲಿ ಯೋಹಾನನಿಗೆ ತಾನು ಲಾಜರನ ಮರಣದ ಸಮಯದಲ್ಲಿ ಮಾರ್ಥಳಿಗೆ ಹೇಳಿದ ಮಾತನ್ನು ಮತ್ತೆ ಹೇಳುತ್ತಿದ್ದಾನೆ. ಯೋಹಾನನು ಬರೆದ ಮಾತುಗಳು ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ (ಯೋಹಾನ 11:25, 26).

ಮಾರ್ಥಳ ಜೊತೆಗೆ ಮತ್ತು ಈಗ ಯೋಹಾನನ ಸಂಗಡ ಯೇಸುವು ಪುನರುತ್ಥಾನದ ನಿರೀಕ್ಷೆಯ ಕಡೆಗೆ ನಮ್ಮನ್ನು ನಡೆಸುತ್ತಿದ್ದಾನೆ, ಇದು ಕ್ರೈಸ್ತ ವಿಶ್ವಾಸದ ಅಂತ್ಯ ಮತ್ತು ಪರಾಕಾಷ್ಠೆಯನ್ನು ಸೂಚಿಸುತ್ತದೆ. ಈ ನಿರೀಕ್ಷೆಯನ್ನು ಬಿಟ್ಟರೆ ನಮಗೆ ಇನ್ನು ಯಾವ ನಿರೀಕ್ಷೆಯಿದೆ?

**ಪ್ರಕಟಣೆ 22:7,12,13 ನ್ನು ಓದಿರಿ. ಯೇಸುವಿನ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?**

---

"ಯೇಸುವು ಅಲ್ಫಾ ಮತ್ತು ಒಮೇಗಾ ಆಗಿದ್ದಾನೆ ಆತನು ಹಳೆಯ ಒಡಂಬಡಿಕೆಯ ಆದಿಕಾಂಡ ಮತ್ತು ಹೊಸ ಒಡಂಬಡಿಕೆಯ ಪ್ರಕಟಣೆಯಾಗಿದ್ದಾನೆ. ಎರಡು ಕೂಡ ಕ್ರಿಸ್ತನಲ್ಲಿ ಸೇರುತ್ತವೆ. ಆದಾಮನು ಮತ್ತು ದೇವರು ಇಬ್ಬರೂ ಕೂಡ ಎರಡನೇಯ ಅದಾಮನಲ್ಲಿ ಸಮಾಧಾನ ಹೊಂದಿದ್ದರೆ, ಆತನು ಸೈತಾನನ ಶೋಧನೆಗಳನ್ನು ಜಯಿಸಿ ಆದಾಮನು ತಂದ ಅವಮಾನ ಮತ್ತು ವಿಫಲತೆಯನ್ನು ಹಾಗೂ ಬೀಳುವಿಕೆಯನ್ನು ಜಯಿಸಿದ್ದಾನೆ" **ಎಲೆನ್ ಜಿ ವೈಟ್ ಎಸ್ ಡಿ ಎ ಕಾಮೆಂಟರಿ ಸಂಪುಟ 6, ಪುಟ 1092.** ಹೌದು, ಯೇಸುವು ಆದಿಯು ಮತ್ತು ಅಂತ್ಯವಾಗಿದ್ದಾನೆ. ಆದಿಯಲ್ಲಿ ಆತನು ನಮ್ಮನ್ನು ಸೃಷ್ಟಿಸಿದ್ದಾನೆ, ಮತ್ತು ಕೊನೆಯಲ್ಲಿ ನಮ್ಮನ್ನು ಮರುಸೃಷ್ಟಿ ಮಾಡುತ್ತಾನೆ.

ಆದಿಯಿಂದ ಅಂತ್ಯದವರೆಗೂ, ಪ್ರಕಟಣೆಯ ಪುಸ್ತಕವು ನಮಗೆ ಚರಿತ್ರೆಯ ಕುರಿತಾಗಿ ತಿಳಿಸುವುದಲ್ಲದೆ ಕೊನೆಯ ಕಾಲದ ಘಟನೆಗಳ ವಿಷಯವಾಗಿ ತಿಳಿಸಿದರೂ ಕೂಡ ಅದು ಇನ್ನೂ ಯೇಸುವಿನ ಕುರಿತಾದ ಪ್ರಕಟಣೆಯಾಗಿದೆ. ಮತ್ತೆ, ಕೊನೆಯ ಕಾಲದ ಘಟನೆಗಳ ವಿಚಾರವಾಗಿ ನಾವು ಏನೇ ಕಲಿತರೂ ಕೂಡ, ಆ ಎಲ್ಲಾ ಕಲಿಕೆಯ ಕೇಂದ್ರಬಿಂದು ಯೇಸು ಕ್ರಿಸ್ತನಾಗಿದ್ದಾನೆ.

**ಯಾವುದೇ ವಿಧದಲ್ಲಿಯಾದರೂ ಸರಿ ಯೇಸು ಕ್ರಿಸ್ತನನ್ನೂ ನಮ್ಮ ಜೀವನದ ಕೇಂದ್ರ ಬಿಂದುವಾಗಿ ಹೇಗೆ ಇಟ್ಟುಕೊಳ್ಳುವುದು ಹೇಗೆ?**

**ಶುಕ್ರವಾರ**

**ಮುಂದಿನ ಆಲೋಚನೆಗಾಗಿ:** ಪ್ರಕಟಣೆಯ ಪುಸ್ತಕದಲ್ಲಿ ದೇವರ ಕುರಿತಾದ ಆಳವಾದ ಚಿತ್ರಣವಿದೆ. ಈ ಪ್ರೇರಣೆಯ ಪುಸ್ತಕಕ್ಕೆ ನೀಡಲಾಗಿರುವ ಹೆಸರು ಪ್ರಕಟಣೆ ಇದೊಂದು ಮುಚ್ಚಲಾಗಿರುವ ಪುಸ್ತಕ ಎಂಬ ಹೆಗ್ಗಳಿಕೆಗೆ ವಿರುದ್ಧವಾಗಿದೆ. ಪ್ರಕಟಣೆ ಎಂದರೆ ಬಹಿರಂಗವಾಗಿರುವ ವಿಷಯ. ಈ ಪುಸ್ತಕದಲ್ಲಿರುವ ರಹಸ್ಯಗಳನ್ನು ದೇವರು ಆತನ ಸೇವಕನಿಗೆ ಬಹಿರಂಗ ಮಾಡಿದ್ದಾನೆ, ಮತ್ತು ಅವುಗಳನ್ನು ಹೇಗೆ ತೆರೆದು ಓದಬೇಕು ಎಂದು ಆತನೇ ವಿನ್ಯಾಸಗೋಳಿಸಿದ್ದಾನೆ. ಲೋಕದ ಚರಿತ್ರೆಯ ಕೊನೆಯಲ್ಲಿ ಜೀವಿಸುವವರಿಗಾಗಿ ಮತ್ತು ಯೋಹಾನನ ಕಾಲದಲ್ಲಿ ಜೀವಿಸುವವರಿಗಾಗಿ ಈ ಸತ್ಯಗಳು ಬರೆಯಲ್ಪಟ್ಟಿವೆ. ಈ ಪ್ರವಾದನೆಯಲ್ಲಿ ಪ್ರಸ್ತಾಪಿಸಿರುವ ಕೆಲವು ವಿಷಯಗಳು ಈಗ ನೆರವೇರುತ್ತಿವೆ; ಕೆಲವು ವಿಷಯಗಳು ಕತ್ತಲೆಯ ಶಕ್ತಿಗೂ ಮತ್ತು ಬೆಳಕಿನ ಶಕ್ತಿಗೂ ನಡುವೆ ನಡೆಯುತ್ತಿರುವ ಮಹಾ ಹೋರಾಟದ ಅಂತಿಮ ಭಾಗದಲ್ಲಿ ನೆರವೇರುತ್ತವೆ ಮತ್ತು ಕೆಲವು ವಿಷಯಗಳು ಹೊಸ ಭೂಮಿ ಮತ್ತು ಆಕಾಶಗಳು ಅಸ್ತಿತ್ವಕ್ಕೆ ಬಂದ ನಂತರ ನೆರವೇರುವ ವಿಷಯಗಳಾಗಿವೆ. **ಎಲೆನ್ ಜಿ ವೈಟ್, ದಿ ಅಕ್ಟ್ಸ್ ಆಫ್ ಅಪೋಸ್ತೆಸ್, ಪುಟ 584.**

ಈ ಪುಸ್ತಕದ ಆರಂಭ ಮತ್ತು ಅಂತ್ಯದಲ್ಲಿ ಈ ವಾರ ನಾವು ನೋಡಿದ ವಚನಗಳು, ಈ ಪುಸ್ತಕವು ಹೇಗೆ ಯೇಸುವಿನ ಕುರಿತಾದ ಪ್ರಕಟಣೆಯಾಗಿದೆ

ಎಂದು ತಿಳಿಸುತ್ತದೆ. ಚರಿತ್ರೆಯ ಘಟನೆಗಳಿಗೆ ಹಳೆಯ ಒಡಂಬಡಿಕೆಯ ಉಲ್ಲೇಖಗಳನ್ನು ತೋರಿಸಿದರೂ ಕೂಡ ಪ್ರಕಟಣೆಯ ಪುಸ್ತಕವು ನಮಗೆ ಯೇಸುವಿನ ಕುರಿತಾದ ಹೆಚ್ಚಿನ ವಿಷಯಗಳನ್ನು ತಿಳಿಸುತ್ತದೆ. (ಪ್ರಕಟಣೆ 3:14; 5:5,6; 7:14; 19:11–16) ಇದಕ್ಕಿಂತ ಹೆಚ್ಚಿನ ವಚನಗಳು ಆತನ ಕುರಿತಾದ ಪ್ರಕಟಣೆಯನ್ನು ತಿಳಿಸುತ್ತವೆ. ಈ ವಚನಗಳನ್ನು ನಾವು ಒಟ್ಟಾಗಿ ಸೇರಿಸಿ ನೋಡಿದರೆ ಯೇಸುವಿನ ಕುರಿತಾದ ಶಕ್ತಿಶಾಲಿಯಾದ ಪ್ರಾತಿನಿಧಿತ್ವವನ್ನು ಗಮನಿಸಬಹುದು ಮತ್ತು ಆತನ ಹಿಂಬಾಲಕರು ಎಂದು ಹೇಳಿಕೊಳ್ಳುವ ನಮಗೆ ಆತನು ಏನಾಗಿದ್ದಾನೆ ಎಂಬುದರ ಕುರಿತಾಗಿ ಈ ಪುಸ್ತಕವು ಬಹಳ ಸ್ಪಷ್ಟವಾಗಿ ತಿಳಿಸುತ್ತದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಹೊಸ ಒಡಂಬಡಿಕೆಯುದ್ದಕ್ಕೂ ಕೂಡ ಹಳೆ ಒಡಂಬಡಿಕೆಯ ಉಲ್ಲೇಖವನ್ನು ಮಾಡಿರುವುದು ಯಾವ ಅರ್ಥವನ್ನು ನೀಡುತ್ತದೆ? ಇದು ದೇವರ ವಾಕ್ಯವು ನಮ್ಮ ನಂಬಿಕೆಗೆ ಎಷ್ಟು ಪ್ರಾಮುಖ್ಯವಾಗಿದೆ ಮತ್ತು ಅದನ್ನು ನಾವು ಎಷ್ಟು ಗಂಭಿರವಾಗಿ ಪರಿಗಣಿಸಬೇಕು ಎಂದು ತಿಳಿಸುತ್ತದೆ? ನಮ್ಮ ವ್ಯಯಕ್ತಿಕ ಜೀವನದಲ್ಲಿ ಹಾಗೂ ಸಭೆಯ ಜೀವನದಲ್ಲಿ ಸತ್ಯವೇದದ ಅಧಿಕಾರವನ್ನು ಪ್ರಶ್ನಿಸುವ ಎಲ್ಲಾ ಪ್ರಯತ್ನಗಳ ಮತ್ತು ಅಭ್ಯಾಸಗಳ ವಿರುದ್ದವಾಗಿ ಹೋರಾಡಲು ಇದು ಹೇಗೆ ಸಹಾಯ ಮಾಡುತ್ತದೆ?

2. ಯೇಸುವಿನ ಕುರಿತಾದ ಇನ್ನೂ ಕೆಲವು ವಚನಗಳಿಗಾಗಿ ಪ್ರಕಟಣೆಯ ಪುಸ್ತಕವನ್ನು ತಿರುಗಿಸಿ ಅಧ್ಯಯನ ಮಾಡಿರಿ. ನಿಮ್ಮ ತರಗತಿಯಲ್ಲಿ ಆ ವಚನಗಳನ್ನು ಗಟ್ಟಿಯಾಗಿ ಓದಿರಿ. ನಮ್ಮ ಕರ್ತನ ಕೆಲಸ, ಸ್ವಭಾವ, ಅಧಿಕಾರ ಮತ್ತು ಗುಣಲಕ್ಷಣಗಳ ಈ ಆ ವಚನಗಳು ಏನು ಹೇಳುತ್ತವೆ? ಈ ವಚನಗಳಿಂದ ನೀವು ಯಾವ ರೀತಿಯ ಸಮಾಧಾನವನ್ನು ಹೊಂದುವಿರಿ?

3. ಮರಣದ ಈ ಲೋಕದಲ್ಲಿ ಸತ್ತವರ ಕುರಿತಾದ ಪುನರುತ್ಥಾನದವಾಗ್ದಾನವು ನಮಗೆ ಯಾವ ರೀತಿಯ ಆಶ್ವಾಸನೆಯನ್ನು ನೀಡುತ್ತದೆ?